# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 177 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 28-01-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಅ.ನಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ-150ಎ ರಲ್ಲಿ ಸಿಂಧನೂರು ಹಳ್ಳಕ್ಕೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಕಾಮಗಾರಿ ಕಳಪೆಯಿಂದ ಕೂಡಿರುವ ಬಗ್ಗೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಲಾಗಿದ್ದು, ಅಧಿಕಾರಿಗಳು ಈ ಸಂಬಂಧ ನೀಡಿರುವ ವರದಿಯಲ್ಲಿ ಯಾವ ಅಂಶಗಳು ಒಳಗೊಂಡಿವೆ. | ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ-150ಎ ರ ಕಿ.ಮೀ. 171.601 ರಿಂದ 172.310 ರವರೆಗೆ ಬೃಹತ್ ಸೇತುವೆ ನಿರ್ಮಾಣ ಕಾಮಗಾರಿಯನ್ನು ಮೆ: ತ್ರಿಮೂರ್ತಿ ಕನ್ಸ್ಟ್ರಕ್ಷನ್ಸ್ ಸಾವಂತವಾಡಿ ರವರಿಗೆ ರೂ.17.69 ಕೋಟಿ ಮೊತ್ತಕ್ಕೆ ಗುತ್ತಿಗೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ದಿನಾಂಕ:22.11.2021 ರಂದು ಪ್ರಾರಂಭಿಸಿ, ದಿನಾಂಕ:21.11.2023 ರಂದು ಪೂರ್ಣಗೊಳಿಸಲಾಗಿರುತ್ತದೆ.<br><br>ಕಾಮಗಾರಿ ಕಳಪೆಯಿಂದ ಕೂಡಿರುವ ಬಗ್ಗೆ ಇಲಾಖಾ ಅಧಿಕಾರಿಗಳಿಂದ ದಿನಾಂಕ:22.12.2025 ರಂದು ಪರಿಶೀಲನೆಯ ಸಮಯದಲ್ಲಿ ಸೇತುವೆಯು ಯಾವುದೇ ಹಂತದಲ್ಲಿ ಕಳಪೆಯೆಂದು ಕಂಡು ಬರುತ್ತಿಲ್ಲ ಎಂದು ಅಭಿಪ್ರಾಯಿಸುತ್ತಾ, ಅಗತ್ಯವಿರುವ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಿ, ಅದರಂತೆ ಕ್ರಮ ವಹಿಸಲು ತಿಳಿಸಲಾಯಿತು. ಚರ್ಚಿಸಿದ ಅಂಶಗಳು ಈ ಕೆಳಗಿನಂತೆ ಇರುತ್ತವೆ.<br><br>**1) ಸಿಂಧನೂರು ಹಳ್ಳದ ಸೇತುವೆ ಕೆಳಗಡೆ ಸಿಲ್ಟ್ (ಹೂಳು) ತೆಗೆಯುವ ಕುರಿತು:-**<br>ಸೇತುವೆ ಕೆಳಗಡೆ ಕೂಡಿರುವ ಸಿಲ್ಟನ್ನು ತೆಗೆಯಲು 2025-26ರ ಸಾಲಿನ ಸಿಂಧನೂರು ನಗರ ವ್ಯಾಪ್ತಿಯಲ್ಲಿನ ಎಸ್.ಟಿ.ಎಮ್.ಸಿ. ಕಾಮಗಾರಿಯಲ್ಲಿ ಅಳವಡಿಸಿದ್ದು ಪ್ರಸ್ತುತ ಎಸ್.ಟಿ.ಎಮ್.ಸಿ. ಕಾಮಗಾರಿಯು ಟೆಂಡರ್ ಕರೆಯುವ ಹಂತದಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಡಿಸಿಲ್ಟಿಂಗ ಕಾಮಗಾರಿ ಕೈಗೊಳ್ಳಲಾಗುವುದು.<br><br>**2) ಸ್ಟ್ರೀಟ್ ಲೈಟ್‌ಗಳನ್ನು ಅಳವಡಿಸುವ ಬಗ್ಗೆ:-**<br>ಪ್ರಸ್ತುತ ಪೂರ್ಣಗೊಂಡ ಹೊಸ ಸೇತುವೆ ಹಾಗೂ ಹಳೆಯ ಸೇತುವೆ ಭಾಗದ ಮೇಲೆ ಸ್ಟ್ರೀಟ್ ಲೈಟ್‌ಗಳನ್ನು ಅಳವಡಿಸುವ ಅವಕಾಶವು ಮೂಲ ಅಂದಾಜು ಮತ್ತು ಕರಾರಿನಲ್ಲಿ ಇರುವುದಿಲ್ಲ. ಕಾರಣ ಸ್ಟ್ರೀಟ್ ಲೈಟ್ಸ್, ವಿಯರಿಂಗ ಕೋಟ್, ಸಿಸಿ ಡ್ರೇನ್ ಒಳಗೊಂಡಂತೆ ಹಳೆ ಸೇತುವೆಗೆ ಒಂದು ಸಲಕ್ಕೆ ಸಮಗ್ರವಾದ ಸುಧಾರಣೆ ಮಾಡಲು ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. |
| ಆ) | ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯ ನ್ಯೂನತೆಗಳನ್ನು ಸರಿಪಡಿಸಲು ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ? | ಮೂಲ ಗುತ್ತಿಗೆ ನಿಯಮದಂತೆ ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.<br><br>ಕಂಡಿಕೆ-'ಅ'ರಲ್ಲಿ ತಿಳಿಸಿದಂತೆ ಸದರಿ ಅಂಶಗಳು ಕಾಮಗಾರಿಯ ಮೂಲ ಅಂಗ್ರಿಮೆಂಟ್ ನಲ್ಲಿ ಇಲ್ಲದ ಕಾರಣ ಅವುಗಳನ್ನು ಒಳಗೊಂಡ ಅಂದಾಜು ಪತ್ರಿಕೆ/ ಪ್ರಸ್ತಾವನೆ ಅನುಮೋದನೆಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುತ್ತಿದ್ದು, ಅನುಮೋದನೆ ದೊರಕಿದ ನಂತರ ಸದರಿ ಕಾಮಗಾರಿಗಳನ್ನು |

| ಅ.ನಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ನಿರ್ವಹಿಸಲಾಗುವುದು. |
| ಇ) | ಈ ರೀತಿ ಕಳಪೆ ಕಾಮಗಾರಿಯನ್ನು ಕೈಗೊಂಡಿರುವ ಗುತ್ತಿಗೆದಾರರ ವಿರುದ್ಧ ಯಾವ ಕ್ರಮವಹಿಸಲಾಗುತ್ತದೆ? | ಸೇತುವೆಯ ಅಗಲೀಕರಣ/ನಿರ್ಮಾಣದಲ್ಲಿ ಬಳಸಲಾದ ಸಾಮಗ್ರಿಗಳ ಗುಣಮಟ್ಟ ಪರಿಕ್ಷೆಗಳನ್ನು ಇಲಾಖಾ ಲ್ಯಾಬ್‌ಗಳಲ್ಲಿ ಮಾಡಿದ್ದು ಅನುಮೋಧಿತ ಡ್ರಾಯಿಂಗ್‌ನಂತೆ ಸೇತುವೆ ಕಾಮಗಾರಿಯ ನಿರ್ಮಾಣದಲ್ಲಿ ಫೌಂಡೇಶನ್‌ನಿಂದ ತಾಂತ್ರಿಕ ಸ್ಪೆಸಿಫಿಕೇಶನ್‌ಗಳಂತೆ ಕಾಮಗಾರಿ ನಿರ್ವಹಿಸಲಾಗುತ್ತಿರುತ್ತದೆ.<br><br>ಪ್ರತಿ ಹಂತಗಳಲ್ಲಿಯೂ ಇಲಾಖೆಯ ಗುಣ ನಿಯಂತ್ರಣ ಅಧಿಕಾರಿಗಳು ಹಾಗೂ ಇಲಾಖಾ ಮೇಲಾಧಿಕಾರಿಗಳು ಪರಿವೀಕ್ಷಣೆ ಮಾಡಿರುತ್ತಾರೆ. ಮೇಲಾಧಿಕಾರಿಗಳು ನೀಡಿದ ಎಲ್ಲಾ ನಿರ್ದೇಶನಗಳ ಅನುಪಾಲನೆಯೊಂದಿಗೆ ನಿರ್ಮಾಣ ಕೆಲಸ ಕೈಗೊಳ್ಳಲಾಗಿದೆ.<br><br>ಸೇತುವೆ ಗುಣಮಟ್ಟಕ್ಕೆ ಸಂಬಂಧಿಸಿದಂತೆ MoRT&H ನ Mobile Inspection Vehicle ಪರಿವೀಕ್ಷಣಾ ತಂಡದಿಂದ ಪರಿವೀಕ್ಷಣೆ ಮಾಡಿದ್ದು ಕಾಮಗಾರಿ ಕಳಪೆ ಬಗ್ಗೆ ಯಾವುದೇ ವ್ಯತಿರಿಕ್ತ ವರದಿ ಇರುವುದಿಲ್ಲ. ಸೇತುವೆಯನ್ನು ಸಂಚಾರಕ್ಕೆ ಮುಕ್ತಗೊಳಿಸಿದ್ದು ವಾಹನಗಳ ಸಂಚಾರಕ್ಕೆ ಉಪಯೋಗದಲ್ಲಿರುತ್ತದೆ.<br><br>ಹೀಗೆ ಸೇತುವೆ ನಿರ್ಮಾಣದ ಯಾವುದೇ ಹಂತದಲ್ಲಿಯೂ ಕಳಪೆಯಾಗದಂತೆ ಕಾಲಕಾಲಕ್ಕೆ ನಿಯಮಾನುಸಾರ ಅವಶ್ಯಕ ಪರೀಕ್ಷೆಗೆ ಒಳಪಡಿಸಿ, ತೃಪ್ತಿಕರ ಪರೀಕ್ಷಾ ವರದಿಗಳನ್ನು ಪಡೆಯಲಾಗಿದೆ. ರಸ್ತೆ ಬಳಕೆದಾರರ ಸುರಕ್ಷತೆಯೊಂದಿಗೆ ತಾಂತ್ರಿಕ ಮತ್ತು ಗುಣಮಟ್ಟದ ದೃಷ್ಟಿಯಿಂದ ಕಾಮಗಾರಿಯನ್ನು ಸಮರ್ಪಕವಾಗಿ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗಿದೆ. |

ಕಡತ ಸಂಖ್ಯೆ: ಲೋಇ 58 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು